**ದಿನಾಂಕ 19.08.2026 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲು : ಶ್ರೀ ಎಂ ಎಸ್ 3 ನೇ ಎದುರುದಾರರ ಪರ ವಕೀಲರಿಂದಃ**

ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನನ್ನ ವೃತ್ತಿ ವ್ಯವಸಾಯ ಮತ್ತು ಆಟೋ ಚಾಲಕ ಅಂತ ಬರೆಸಿರುತ್ತೇನೆ ಎಂದರೆ ಸರಿ. ಅಪಘಾತದ ದಿನ ಆಟೋವನ್ನು ನಾನೇ ಚಾಲನೆ ಮಾಡುತ್ತಿದ್ದೆ. ನನ್ನ ಚಾಲನಾ ಪರವಾನಿಗೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅಪಘಾತದ ಸಮಯದಲ್ಲಿ ಆಟೋದಲ್ಲಿ ನಾನು ಒಬ್ಬನೇ ಇದ್ದೆ. ನಾನು ಮಾದಾಪುರದಿಂದ ಕೊಳ್ಳೆಗಾಲಕ್ಕೆ ಹೋಗುತ್ತಿದ್ದೆ. ನನಗೆ ಅಪಘಾತ ಪಡಿಸಿದ ಬಸ್ಸಿನ ನಂಬರ್ ನನಗೆ ಗೊತ್ತಿಲ್ಲ. ಅಪಘಾತ ಪಡಿಸಿದವರ ಹೆಸರನ್ನು ನನಗೆ ನನ್ನ ಮಾವ ನಾಗರಾಜಮೂರ್ತಿ ರವರು ಹೇಳಿರುತ್ತಾರೆ. ನಾಗರಾಜಮೂರ್ತಿಗೆ ಬಸ್ಸಿನ ಬಗ್ಗೆ ಯಾರೋ ದೂರವಾಣಿ ಕರೆ ಮೂಲಕ ಹೇಳಿರುತ್ತಾರೆ. ನನಗೆ ಪ್ರಜ್ವಲ್ ಆಸ್ಪತ್ರೆ ಮೈಸೂರಿನಲ್ಲಿದ್ದಾಗ ಪ್ರಜ್ಞೆ ಬಂದಿರುತ್ತದೆ. ನನಗೆ ನಾಗರಾಜಮೂರ್ತಿ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ಅಪಘಾತವಾದ ತಕ್ಷಣ ತಿ. ನರಸೀಪುರ ಸರ್ಕಾರಿ ಆಸ್ಪತ್ರೆಗೆ ನನಗೆ ದಾಖಲಿಸಿದ್ದರು. ತಿ. ನರಸೀಪುರ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಅಪಘಾತದಲ್ಲಿ ಎಡಗೈ ಮೂಳೆ ಮುರಿದಿದ್ದು ಸೊಂಟಕ್ಕೆ ಎಟಾಗಿರುತ್ತದೆ. ಪ್ರಜ್ವಲ್ ಆಸ್ಪತ್ರೆಯಲ್ಲಿ ದಿಃ 23.01.2023 ಕ್ಕೆ ದಾಖಲಾಗಿ 8 ದಿನ ಒಳರೋಗಿಯಾಗಿ ದಾಖಲಿದ್ದೆ. ಆ ಸಮಯದಲ್ಲಿ ನನಗೆ ಶಸ್ತ್ರ ಚಿಕಿತ್ಸೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಚಿಕಿತ್ಸೆ ನೀಡಿದ ವೈದ್ಯರ ಹೆಸರು ನನಗೆ ಗೊತ್ತಿಲ್ಲ. ನಾನು ಗುಣ ಮುಖ ಹೊಂದಿದ ನಂತರ ನನ್ನನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಿರುತ್ತಾರೆ ಎಂದರೆ ಸರಿ. ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ನಂತರ ನಾನು

ಮುಂದುವರಿದ ಚಿಕಿತ್ಸೆ ಪಡೆದಿದ್ದು ಆ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ಆ ಬಗ್ಗೆ ದಾಖಲೇ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು 2 ನೇ ಬಾರಿ 8 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ಶಸ್ತ್ರ ಚಿಕಿತ್ಸೆಯ ನಂತರ ನಾನು ವೈದ್ಯರ ಸಲಹೆ ಸೂಚನೆಗಳನ್ನು ಪಾಲನೆ ಮಾಡದ್ದರಿಂದ ಮತ್ತೆ ನನಗೆ 2 ನೇ ಬಾರಿ ಸೊಂಕು ತಗುಲಿ ಚಿಕಿತ್ಸೆ ಮಾಡಬೇಕಾಯಿತು ಎಂದರೆ ಸರಿಯಲ್ಲ.

2. ನಾನು ಬೇರೆಯವರ ಆಟೋ ಚಲಾಯಿಸುತ್ತಿದ್ದೆ ಎಂದರೆ ಸರಿಯಲ್ಲ. ನಾನು ಪ್ರತಿ ತಿಂಗಳ 30 ಸಾವಿರ ಆದಾಯ ಹೊಂದಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಸ್ಸು ಚಾಲಕನ ತಪ್ಪಿನಿಂದ ಅಪಘಾತ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಚಾಲನೆ ಗೊತ್ತಿಲ್ಲದ್ದರಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ 8 ರ ಬಿಲ್ಲುಗಳು 3 ಬೇರೆ ಬೇರೆ ಜನರ ಹೆಸರುಗಳಲ್ಲಿವೆ ಎಂದರೆ ಸರಿಯಲ್ಲ. ಕ್ರಮ ಸಂಖ್ಯೆ 35 ರ ಬಿಲ್ಲಿನಲ್ಲಿ ಯಾರ ಹೆಸರು ಇರುವುದಿಲ್ಲ ಎಂದರೆ ಸರಿಯಲ್ಲ. ಕ್ರಮ ಸಂಖ್ಯೆ 97-98 ಮುಂಗಡ ಹಣ ಪಾವತಿಸಿದ ಬಿಲ್ಲುಗಳು ಎಂದರೆ ಸರಿ. ನಿಪಿ 8 ರ ವೈದ್ಯಕೀಯ ಬಿಲ್ಲುಗಳಿಗೆ ಪೂರಕವಾಗಿ ವೈದ್ಯರ ಸಲಹಾ ಚೀಟಿಗಳು ಇರುವುದಿಲ್ಲ ಎಂದರೆ ಸರಿ. ನಿಪಿ 10 ರ ಡಿಸ್ ಚಾರ್ಜ ಸಮ್ಮರಿಯಲ್ಲಿ ತಿ. ನರಸೀಪುರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ನಾನು ಹಾಜರುಪಡಿಸಿದ ನಿಪಿ 8 ರ ಬಿಲ್ಲುಗಳಲ್ಲಿ ನಾಗರಾಜೇಗೌಡ ಮೆಮೋರಿಯಲ್ ಆಸ್ಪತ್ರೆ ಇವೆ ಎಂದರೆ ಸಾಕ್ಷಿ ಪ್ರಜ್ವಲ್ ಆಸ್ಪತ್ರೆಯನ್ನು ನಾಗರಾಜೇಗೌಡ ಆಸ್ಪತ್ರೆಯಂದು ಕರೆಯುತ್ತಾರೆ ಎಂದು ಹೇಳುತ್ತಾರೆ. 3 ನೇ ಎದುರುದಾರ ನನಗೆ ಅಪಘಾತದ ಪರಿಹಾರ ಹಣ ಕೊಡಲು

ಬಾಧ್ಯಸ್ಥರಾಗುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಎಂ.ಎ.ಸಿ.ಟಿ., ತಿ.ನರಸೀಪುರ.**